ಕನ್ನಡದ ಹೆಮ್ಮೆ



# ‘ಜಾತಿ ತಾರತಮ್ಯ ನಿವಾರಿಸಲು ಶತಮಾನಗಳೇ ಬೇಕು

**‘ವಿಶ್ವಸಂಸ್ಥೆಯ ಜನಾಂಗೀಯ ಭೇದ’ ವಿಶೇಷ ತಜ್ಞೆ ಕೆ.ಪಿ. ಅಶ್ವಿನಿ ಸಂದರ್ಶನ**

ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯ ಜನಾಂಗೀಯ ಭೇದ ಅಧ್ಯಯನದ ವಿಶೇಷ ತಜ್ಞೆಯಾಗಿ ಡಾ. ಕೆ.ಪಿ. ಅಶ್ವಿನಿ ಆಯ್ಕೆಯಾಗಿದ್ದಾರೆ. ಈ ಅವಕಾಶ ಎಷ್ಟಾದವರಿಗೆ ಮೊದಲ ಬಾರಿಗೆ ಸಿಕ್ಕಿದೆ. ಈ ಗೌರವ ಕನ್ನಡದ ದಲಿತ ಹೆಣ್ಣುಮಗಳಿಗೆ ದೊರೆತಿರುವುದು ಮತ್ತೂ ವಿಶೇಷ.

■ ರಾಘವೇಂದ್ರ ಕೆ. ತೊಗರ್ಸಿ

ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್.

◆ **ನಿಮ್ಮ ಓದು, ಹವ್ಯಾಸ, ಹಿನ್ನೆಲೆಯನ್ನು ಹೇಳಿ.**

ತಂದೆ ಕರ್ನಾಟಕ ಸರ್ಕಾರದ ನೌಕರಿಯಲ್ಲಿ ಇದ್ದವರು. ಹೀಗಾಗಿ, ರಾಜ್ಯದ ಬೇರೆ ಬೇರೆ ಊರುಗಳಲ್ಲಿ– ಮಂಗಳೂರು, ಮೈಸೂರು, ಕಲಬುರಗಿ, ಬೆಂಗಳೂರುಗಳಲ್ಲಿ– ಓದಬೇಕಾಯಿತು. ಎಂ.ಫಿಲ್. ಮತ್ತು ಪಿಎಚ್.ಡಿ.ಯನ್ನು ನವದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಮಾಡಿದ್ದೇನೆ. ಇದು ನನ್ನ ಸಾಂಪ್ರದಾಯಿಕ ಶಿಕ್ಷಣ. ನನ್ನ ತಾಯಿ ಜಯಮ್ಮ, ತಂದೆ ಪ್ರಸನ್ನಕುಮಾರ್. ಇಬ್ಬರೂ ಶಿಕ್ಷಿತರು. ನನ್ನ ತಂದೆ ದಲಿತ ಸಂಘರ್ಷ ಸಮಿತಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಅದರಿಂದಾಗಿ ಚಳವಳಿಯ ಸಂಪರ್ಕ ಬಾಲ್ಯದಲ್ಲಿಯೇ ಸಿಕ್ಕಿತು. ಕಾಲೇಜಿನಲ್ಲಿಯೂ ಸಮಸಮಾಜ ಕಾಳಜಿಯ ಚಳವಳಿಯಲ್ಲಿ ಭಾಗವಹಿಸಿದ್ದೆ. ವಿಶ್ವವಿದ್ಯಾಲಯದಲ್ಲಿ ದಲಿತ ಸಂಘಟನೆಯಲ್ಲಿ ಕ್ರಿಯಾಶೀಲಳಾಗಿದ್ದೆ. ತಳಸಮುದಾಯ ಮತ್ತು ಆದಿವಾಸಿ ಸಮುದಾಯಗಳ ಚಿಕ್ಕಚಿಕ್ಕ ಸಂಘಟನೆಗಳಲ್ಲಿ ಸ್ವಯಂಸೇವಕಿಯಾಗಿದ್ದೆ. ಇದಿಷ್ಟು ನನ್ನ ಹಿನ್ನೆಲೆ. ಪ್ರವಾಸ ನನ್ನ ನೆಚ್ಚಿನ ಹವ್ಯಾಸ. ಐತಿಹಾಸಿಕ ಪ್ರಸಿದ್ಧ ಸ್ಥಳಗಳಿಗೆ ಭೇಟಿ ನೀಡುತ್ತೇನೆ. ಪುಸ್ತಕಗಳನ್ನು ಓದುವುದೂ ನನಗೆ ತುಂಬ ಇಷ್ಟ.

◆ **ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯ ಜನಾಂಗೀಯ ಭೇದ ಅಧ್ಯಯನದ ವಿಶೇಷ ತಜ್ಞೆಯಾಗಿದ್ದೀರಿ. ಆಯ್ಕೆಯ ವಿಧಾನ ಹೇಗಿತ್ತು?**

ವಿಶ್ವಸಂಸ್ಥೆ ವಿಷಯ ಪ್ರಾವೀಣ್ಯತೆಗೆ ಹೆಚ್ಚು ಮಹತ್ವ ನೀಡುತ್ತದೆ. ಮೊದಲ ಸುತ್ತಿನಲ್ಲಿ ನನ್ನನ್ನೂ ಸೇರಿದಂತೆ 12 ಮಂದಿಯನ್ನು ಆಯ್ಕೆ ಮಾಡಿದ್ದರು. ಆನ್‌ಲೈನ್ ಮೂಲಕ ಸಂದರ್ಶನ ನಡೆಸಿದರು. ಇಬ್ಬರು ಭಾರತೀಯರು ಸೇರಿ ಬೇರೆ ಬೇರೆ ದೇಶದವರು ಸಂದರ್ಶನದಲ್ಲಿದ್ದೆವು. ವಿಶ್ವಸಂಸ್ಥೆಯ ಶಾಶ್ವತ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳ ಸಮಿತಿ ಸಂದರ್ಶನ ಮಾಡುತ್ತದೆ. ನನ್ನನ್ನು ಬೆಲ್ಜಿಯಂ, ಕತಾರ್ ಮತ್ತು ಮೊರೊಕ್ಕೊದ ಮೂವರು ಸದಸ್ಯರು ಸಂದರ್ಶಿಸಿದ್ದರು. ಅವರಿಗೆ, ಅಭ್ಯರ್ಥಿಗಳ ಸಾಮರ್ಥ್ಯ ಮತ್ತು ವಿಷಯದ ಅರಿವಿನ ಬಗ್ಗೆ ಸಲಹಾ ಸಮಿತಿ ವರದಿಯನ್ನು ನೀಡಿರುತ್ತದೆ. 40 ನಿಮಿಷಗಳ ಸಂದರ್ಶನದಲ್ಲಿ ‘ಏಕೆ ಈ ಸ್ಥಾನಕ್ಕೆ ಬರಲು ಬಯಸುತ್ತಿದ್ದೀರಿ?’ ಎನ್ನುವುದೂ ಸೇರಿ, ಒಂದು ಸನ್ನಿವೇಶ ವಿವರಿಸಿ ಆ ಪರಿಸ್ಥಿತಿಯನ್ನು ಹೇಗೆ ನಿರ್ವಹಿಸುತ್ತೀರಿ? ಎಂದೂ ಕೇಳಿದ್ದರು. ನಮ್ಮಲ್ಲಿ ಮೂವರ ಹೆಸರನ್ನು ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಿಗೆ ಕಳಿಸುತ್ತಾರೆ. ನನಗೆ ವಿಷಯದಲ್ಲಿ ಇದ್ದ ಜ್ಞಾನ, ಬದ್ಧತೆ, ಮಹಿಳೆ ಎನ್ನುವುದನ್ನು ಪರಿಗಣಿಸಿ ನೇಮಕ ಮಾಡಿದ್ದಾರೆ. ಆರು ವರ್ಷ ಅಲ್ಲಿರುತ್ತೇನೆ. ಅಧಿಕೃತವಾಗಿ ವಿಶ್ವಸಂಸ್ಥೆಯ ಆಹ್ವಾನ ಬಂದಿದೆ. ಅಕ್ಟೋಬರ್ ಕೊನೆಯ ವೇಳೆಗೆ ನನ್ನ ಸಹಾಯಕರು ಪ್ರವಾಸದ ವಿವರವನ್ನು ನೀಡುತ್ತಾರೆ.

◆ **ವಿಶ್ವಸಂಸ್ಥೆಯಲ್ಲಿ ನಿಮ್ಮ ಕೆಲಸದ ಸ್ವರೂಪ ಹೇಗಿರುತ್ತದೆ?**

ವಿಶ್ವಸಂಸ್ಥೆಯು ಹಲವು ಆಯಾಮಗಳಲ್ಲಿ ಕೆಲಸ ಮಾಡುತ್ತದೆ. ಜಗತ್ತಿನ ಪ್ರತಿ ಜೀವವೂ ಸ್ವಾತಂತ್ರ್ಯ ಹೊಂದಿರಬೇಕು ಎನ್ನುವುದು ಅದರ ಆಶಯ. ನಾನು ಜನಾಂಗೀಯಭೇದ ಅಧ್ಯಯನದ ವಿಶೇಷ ತಜ್ಞೆಯಾಗಿ ನೇಮಕವಾಗಿದ್ದೇನೆ. ಲಿಂಗ ತಾರತಮ್ಯ, ಸ್ವಚ್ಛತೆ,